ನವರ ಯೋಜನೆ. ಇವೊತ್ತು ಲೋಹಿಯಾಪುರದಲ್ಲಿ ನಾವು ೩೦೦ ಜನಕ್ಕೆ ಪುನರ್‌ವಸತಿ ಮಾಡಿದ್ದೇವೆ, ಅಲ್ಲಿ ಒಬ್ಬರನ್ನೂ ಇಟ್ಟಿಲ್ಲ. ತಹಶೀಲ್ದಾರರನ್ನು ಇಡುವುದು ನೀವು ಮಂಜೂರು ಮಾಡಿದಂತಹ ಯೋಜನೆ. ಇದನ್ನು ನಾನು ಏನೂ ಮಾಡಿಲ್ಲ. ಇವರನ್ನು ತೆಗೆದುಹಾಕಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮೊದಲು ತಾವು ತಹಶೀಲ್ದಾರರುಗಳನ್ನು ಅಲ್ಲಿಂದ ತೆಗೆಯಿರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ತೀರ್ಮಾನ ತೆಗೆದುಕೊಂಡಿದ್ದೇವೆ, ಅವರನ್ನು ಅಲ್ಲಿಂದ ತೆಗೆಯುತ್ತೇವೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಫಲಾನುಭವಿಗಳ ಸ್ಥಿತಿ ಉತ್ತಮ ಗೊಳ್ಳುವುದಕ್ಕೆ ಇವರಿಗೆ ಬೇರೆ ಬೇರೆ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಕಲ್ಪಿಸಿಕೊಡುವಂತೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಏನು ಕಾರ್ಯಗತ ಆಗಿದೆಯೇ ಎಂದು ಗೊತ್ತಾಗಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮೂರು ತಿಂಗಳ ಹಿಂದೆ ಈ ಸೂಚನೆಯನ್ನು ಕೊಟ್ಟಿದ್ದೇನೆ. ಈ ಜನರಿಗೆ ನಾನ್ಕೂರು, ಐನೂರು, ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇವರು ಬಡತನದ ರೇಖೆಯಿಂದ ಮೇಲೆ ಬಂದಿಲ್ಲ, ಅವರು ಬಡತನ ರೇಖೆಯಿಂದ ಮೇಲೆ ಬರುವಂತೆ ಫಲಾನುಭವಿಗಳಿಗೆ ಸಹಾಯ ಕಲ್ಪಿಸಿಕೊಡಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಅವರ ತಾಲ್ಲೂಕಿನಲ್ಲಿ ಆಗದೇ ಇರುವಂತಹ ಯಾವುದಾದರೂ ಪ್ರಕರಣವನ್ನು ಗಮನಕ್ಕೆ ತಂದಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ತಾಲ್ಲೂಕುವಾರು ವಿವರಗಳನ್ನು ಕೇಳಿದ್ದೆ ಅವರು ಕೊಟ್ಟಿಲ್ಲ. ಬೆಂಗಳೂರು ಜಿಲ್ಲೆಯಲ್ಲಿ ನೆರವು ಪಡೆದಿರತಕ್ಕ ಫಲಾನುಭವಿಗಳ ಸಂಖ್ಯೆ ೩೮೬೯ ಎಂದು ಹೇಳಿದ್ದಾರೆ. ಇದು ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಇದೆ ? ಒಂದೇ ತಾಲ್ಲೂಕಿನಲ್ಲಿ ಇಷ್ಟೂ ಆಗಬಹುದು, ನಮ್ಮ ತಾಲ್ಲೂಕಿನ ಅಂಕಿ ಅಂಶಗಳನ್ನು ಕೇಳಿದ್ದೆ ತಾವು ಕೊಟ್ಟಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ತಾಲ್ಲೂಕಿನ ಬಗ್ಗೆ ಅಂಕಿ ಅಂಶಗಳನ್ನು ತಾವು ಕೇಳಿಲ್ಲ.

ಅಧ್ಯಕ್ಷರು.—ಶ್ರೀ ಬಿ. ಬಸವಲಿಂಗಪ್ಪನವರ ಪ್ರಶ್ನೆ ಸಂಖ್ಯೆ ೪೭ (೩೨೩) ಶ್ರೀ ವೇದಾಂತ ಹೆಮ್ಮಿಗೆ ಇವರ ಪ್ರಶ್ನೆ ಸಂಖ್ಯೆ ೪೭ (೧೮೭) ಮತ್ತು ಶ್ರೀ ಎಂ.ಎಸ್. ಪಾಟೀಲ್ ಇವರ ಪ್ರಶ್ನೆ ಸಂಖ್ಯೆ ೪೮ (೧೦೮) ಇವುಗಳನ್ನು ಮುಂದೂಡಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬರುವಷ್ಟರಲ್ಲಿ ಅಲ್ಲಿರುವ ಮನೆಗಳು ಬಿದ್ದು ಹೋಗಿರುತ್ತವೆ. ನನ್ನ ಹೆಸರಿನ ಮುಂದೆ ನರಸಿಂಹರಾಜಾ ಕ್ಷೇತ್ರ ಎಂದು ಹಾಕಿರು ತ್ತೀರಿ, ಏನು ಮುಕ್ತರುನ್ನೀಸಾ ಬೇಗಂ ಅವರಿಗೂ ನಮಗೂ ಜಗಳ ತಂದು ಹಾಕಬೇಕೆಂದು ಮಾಡಿ ದ್ದೀರಾ ?

ಅಧ್ಯಕ್ಷರು.—ಮುಂದಿನ ಪ್ರಶ್ನೆ ಬಾಬೂರೆಡ್ಡಿ ತುಂಗಳ್ ಅವರದ್ದು.

ಅಮಲ ರುಾರಿ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಾಣ ಮಾಡಂವುದು

೪೯ (೩೭೧) ಶ್ರೀ ಬಾಬೂರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸ ವರೇ :—

ಅ) ಬೀಳಗಿ ತಾಲ್ಲೂಕಿನ ಅಮಲರುಾರಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ ಆರಂಭ ವಾಗಿದ್ದು ಯಾವಾಗ ?

ಆ) ಜಲಸಂಗ್ರಹಕ್ಕಾಗಿ ಆಗ ಗುಡ್ಡದ ಮೇಲೆ ನಿರ್ಮಾಣವಾದ ತೊಟ್ಟಿ ಪೂರ್ಣ ಶಿಥಿಲ ಗೊಂಡಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಬದಲಿ ತೊಟ್ಟಿ ಕಟ್ಟಿಸುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧೯೬೯ ರಲ್ಲಿ.

ಆ) ಬಂದಿದೆ.

ಇ) ಬದಲಿ ತೊಟ್ಟಿ ಕಟ್ಟಿಸುವ ಯೋಜನೆ ಇರುವುದಿಲ್ಲ. ಅದೇ ತೊಟ್ಟಿಯನ್ನು ಕೂಡಲೇ ದುರಸ್ತಿಗೊಳಿಸಿ ಉಪಯೋಗಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ಒಂದು ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ನಾನು ಇಚ್ಛಿಸುತ್ತೇನೆ. ಈ ಅಮಲರುಗಳಲ್ಲಿ ಗ್ರಾಮ, ಬೀಳಗಿ ತಾಲ್ಲೂಕಿನಲ್ಲಿ ಇರುವ ಐದಾರು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಒಂದು ಗ್ರಾಮ ಇಲ್ಲಿಯ ಜನಸಂಖ್ಯೆ ನಾಲ್ಕುವರೆ ಸಾವಿರ ಇದೆ. ೧೯೬೯ರಲ್ಲಿ ಈಗಿರುವ ನೀರು ಪೂರೈಕೆ ಯೋಜನೆಯನ್ನು ನಿರ್ಮಾಣ ಮಾಡುವ ಕಾಲದಲ್ಲಿ ಅಲ್ಲಿಯ ಜನಸಂಖ್ಯೆ ಕೇವಲ ಎರಡು ಸಾವಿರಕ್ಕಿಂತ ಮಿಕ್ಕಿರಲಿಲ್ಲ. ಈಗ ಈ ಗ್ರಾಮದಲ್ಲಿ ಎರಡು ಜನತಾ ಕಾಲೋನಿಗಳು ಹರಿಜನ ಕಾಲೋನಿಗಳು ಆಗಿವೆ. ಈ ಊರಿನ ಜನಸಂಖ್ಯೆ ಈಗ ನಾಲ್ಕೂವರೆ ಸಾವಿರಕ್ಕೆ ಬಂದು ಮುಟ್ಟಿದೆ. ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ, ಬೇರೆ ನೀರಿನ ತೊಟ್ಟಿಯನ್ನು ಕಟ್ಟಿಸುವ ಯೋಜನೆ ಇರುವುದಿಲ್ಲ, ಅದೇ ತೊಟ್ಟಿಯನ್ನು ಕೂಡಲೇ ದುರಸ್ತಿಗೊಳಿಸಿ ಉಪಯೋಗಿಸಲಾಗುವುದು ಎಂದು ಹೇಳಿದ್ದೀರಿ. ನಾನು ವಿಧಾನಸಭೆಗಾದರೆ ಆ ಊರಿಗೆ ಹೋಗುತ್ತಿರುತ್ತೇನೆ. ಅಲ್ಲಿಯ ಪರಿಸ್ಥಿತಿ ನನಗೆ ಗೊತ್ತಿದೆ. ಇದನ್ನು ದುರಸ್ತಿಗೊಳಿಸುವುದರಲ್ಲಿ ಏನೂ ಲಾಭ ಇಲ್ಲ ಹಾಗೂ ಏನೂ ಅನುಕೂಲ ಆಗುವುದಿಲ್ಲ. ಹೊಸ ತೊಟ್ಟಿಯನ್ನು ಕಟ್ಟಿದರೆ ಎಷ್ಟು ಖರ್ಚು ಬರುತ್ತದೋ, ಹಳೆಯದನ್ನು ದುರಸ್ತಿ ಮಾಡುವುದಕ್ಕೂ ಅಷ್ಟೇ ಖರ್ಚು ಬರುತ್ತದೆ. ಅಲ್ಲಿ ಒಂದೇ ಇಲೆಕ್ಟ್ರಿಕ್ ಪಂಪ್ ಚಾಲೂ ಇರುವುದು, ಅಲ್ಲಿಂದ ಈ ತೊಟ್ಟಿಗೆ ನೀರನ್ನು ಪಂಪ್ ಮಾಡಿದರೆ ಅದರಲ್ಲಿ ಒಂದು ಹನಿ ನೀರೂ ಕೂಡಾ ನಿಲ್ಲುವುದಿಲ್ಲ. ನಾಲ್ಕೂವರೆ ಸಾವಿರ ಜನಸಂಖ್ಯೆ ಇರುವ ದೊಡ್ಡ ಊರಿಗೆ ಬೇರೆ ಕುಡಿಯುವ ನೀರಿನ ವ್ಯವಸ್ಥೆ ಏನೂ ಇರುವುದಿಲ್ಲ. ಒಂದು ಕುಡಿಯುವ ನೀರಿನ ಬಾವಿಯೂ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೆಚ್ಚು ವಿವರಣೆ ಬೇಡ, ಬೇರೆ ತೊಟ್ಟಿ ಮಾಡಿಸಿ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಆದಷ್ಟು ಬೇಗ ತೀರ್ಪುವಾಗಿ ಮಾಡಿಸಿಕೊಟ್ಟರೆ ಅನುಕೂಲ ವಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇರೆ ತೊಟ್ಟಿ ಕುಡಿಯುವ ನೀರಿನ ನಲ್ಲಿ ಸೌಕರ್ಯ ಎಲ್ಲಾ ಒದಗಿಸಿಕೊಡುತ್ತೇನೆ.

ಕಾವೇರಿ ನೀರು ಸರಬರಾಜಿನ ೩ನೇ ಹಂತ

೫೦ (೨೨೩) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಸಂಸದೀಯ ವ್ಯವಹಾರ, ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಕಾವೇರಿ ೩ನೇ ಹಂತದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು.

(ಆ) ಯೋಜನೆಯ ವೆಚ್ಚ ಹಾಗೂ ಆರ್ಥಿಕ ಮೂಲ.

(ಇ) ವಿವಿಧ ಮೂಲಗಳಿಂದ ಬಂದಿರುವ ಧನ ಸಹಾಯ.

(ಈ) ಯೋಜನೆಯನ್ನು ಯಾವಾಗ ಮುಗಿಸಲು ಉದ್ದೇಶಿಸಲಾಗಿದೆ ಹಾಗೂ ಕಾಮಗಾರಿಗಳ ಈಗಿನ ಸ್ಥಿತಿ ಏನು?

(ಉ) ಯೋಜನೆಯ ಪ್ರಾರಂಭದಿಂದ ಈವರೆಗೆ ವೆಚ್ಚವಾಗಿರುವ ಮೊಬಲಗುಗಳ ವಿವರಣೆ.